ದೇಶಪಾಂಡೆಯ ಗ್ರಹಗತಿಗಳು ಅತ್ಯಂತ ಉನ್ನತ ಸ್ಥಾನದಲ್ಲಿ ಮುಂದುವರಿಯುವುದರಿಂದ ಎಂಥ ಗಂಡಾಂತರ ಬಂದರೂ ಕಿಂಚಿತ್ತೂ ಅಪಾಯವಿಲ್ಲದೆ ಪಾರಾಗುತ್ತಾರೆ. ಎಂಥ ಬಲಾಢ್ಯ ಶತ್ರು ಅವರ ಮೇಲೆ ಸಮರ ಸಾರಿದರೂ ಶತ್ರು ವಿನಾಶ ಆಗುತ್ತದೆಯೇ ಹೊರತು ವಿಕ್ರಂ ದೇಶಪಾಂಡೆಯ ಔನ್ನತ್ಯಕ್ಕೆ ಕಿಂಚಿತ್ತೂ ಧಕ್ಕೆಯಾಗುವುದಿಲ್ಲ. ಈ ವಿಷಯವನ್ನು ಇಪ್ಪತ್ತು ವರ್ಷಗಳ ಹಿಂದೆ ಮೊಟ್ಟ ಮೊದಲು ನನ್ನ ಎದುರಿಗೆ ಕುಂತಾಗಲೇ ದೇಶಪಾಂಡೆಯವರಿಗೆ ಹೇಳಿದ್ದೆ. ಅವರ ಮಗಳು ಹುಟ್ಟಿದ ಜನ್ಮ ನಕ್ಷತ್ರವಂತೂ ಇನ್ನೂ ಅದ್ಭುತವಾದದ್ದು. ಸೂರ್ಯನ ಸುತ್ತಲೂ ಬೇರೆಲ್ಲ ಗ್ರಹಗಳು ಸುತ್ತುವಂತೆ ಅವಳ ತಂಟೆಗೆ ಹೋದವರು ಅವಳನ್ನು ತಾಕದೆ ಗಿರಗಿರ ಸುತ್ತುತ್ತಲೇ ಇರುತ್ತಾರೆ. ನೀವು ವಿಕ್ರಂ ದೇಶಪಾಂಡೆಯವರ ಮೇಲೆ ಇಟ್ಟಿರುವ ಅಭಿಮಾನ ಖಂಡಿತಾ ದೊಡ್ಡದು ಗುನ್ನಾಲಾಲ್ ಜಿ. ಮುಂದಿನ ತಿಂಗಳು ಬಿಡುವ ಮಾಡಿಕೊಂಡು ಒಂದು ದಿನ ಬರುತ್ತೇನೆ. ನೀವು ಹೇಳಿದಂತೆ ಅಪಾರ್ಟ್‌ಮೆಂಟನ್ನು ರಿಜಿಸ್ಟರ್ ಮಾಡಿಸಿಕೊಳ್ಳುತ್ತೇನೆ' ಎಂದಿದ್ದ.

'ಅಗತ್ಯವಾಗಿ ಆಗಬಹುದು ಸಂದೀಪ್ ಜಿ, ಅದು ನಮ್ಮ ಭಾಗ್ಯ' ಎಂದು ಮಾತು ಮುಗಿಸಿದ್ದ ಗುನ್ನಾಲಾಲ್. ಸಂಜೆಯವರೆಗೆ ನಡೆದ ವಿದ್ಯಮಾನಗಳನ್ನು ಆಸ್ಕರ್ ವೈಲ್ಡನಿಗೆ ಹೇಳಲೋ ಬೇಡವೋ ಎಂಬ ಗೊಂದಲದಲ್ಲಿಯೇ ಆಸ್ಕರ್ ವೈಲ್ಡನಿಗೆ ಫೋನ್ ಪ್ರಯತ್ನಿಸಿದ ಅರ್ಧ ಗಂಟೆಯ ನಂತರ ಗುನ್ನಾಲಾಲನ ಫೋನ್ ರಿಂಗಾಗಿತ್ತು. ಸ್ಕ್ರೀನ್ ಮೇಲೆ ಹೆಸರಾಗಲೀ, ನಂಬರ್ ಆಗಲೀ ಡಿಸ್‌ಪ್ಲೆ ಆಗುತ್ತಿರಲಿಲ್ಲ. ಇಂಥ ಕರೆಗಳು ಸಾಮಾನ್ಯವಾಗಿ ತಮ್ಮ ಫೋನ್ ನಂಬರುಗಳನ್ನು ರಹಸ್ಯವಾಗಿಡಲು ಬಯಸುವವರಿಂದ ಬರುತ್ತವೆ. ಅವುಗಳನ್ನು ಹೈಪ್ರೊಫೈಲ್ ಕರೆಗಳೆಂದು ಕರೆಯಲಾಗುತ್ತದೆ. ಬಹುಶಃ ಲಾಸ್ ವೆಗಾಸ್‌ನಿಂದ ಮೊಮ್ಮಗ ಆಸ್ಕರ್ ವೈಲ್ಡ್ ಮಾತನಾಡುತ್ತಿರಬಹುದೆಂದು ಗುನ್ನಾಲಾಲ್ ಬಹಳ ಸಡಗರದಿಂದ 'ಚೆನ್ನಾಗಿದಿಯಾ ಸೋನಾ' ಎಂದಿದ್ದ.

'ಗುನ್ನಾಲಾಲ್ ಜಿ, ಸೋನಾ ಅಮೆರಿಕದಲ್ಲಿ ಪೂರ್ವಿಕಾ ದೇಶಪಾಂಡೆ ಜೊತೆಯಲ್ಲಿ ಹಾಯಾಗಿ ತಿರುಗಾಡ್ತ ಇರ್ಬೇಕು. ವಿಕ್ರಂ ದೇಶಪಾಂಡೆ ಜೊತೆ ಸಂಬಂಧ ಬೆಳೆಸಲು ನಿಮಗೆ ಹೇಳಿದ್ದು ಯಾರು? ಆ ಹುಡುಗಿ ನನ್ನ ತಮ್ಮನ ಮಗನೊಂದಿಗೆ ವರ್ಷದಿಂದಲೂ ಗೆಳೆತನದಲ್ಲಿದ್ದಾಳೆ. ತಿಂಗಳಿಂದ ಅವನನ್ನು ಅವಾಯ್ಡ್ ಮಾಡ್ತ ಇದಾಳಂತೆ. ನನ್ನ ತಮ್ಮನ ಮಗನೇನೂ ಕಡಿಮೆಯಿಲ್ಲ. ಓದಿದ್ದೆಲ್ಲಾ ಲಂಡನ್ನಲ್ಲಿ. ನೋಡೋಕೆ ರಣಬೀರ್ ಕಪೂರನಿಗಿಂತಲೂ ಚನ್ನಾಗಿದಾನೆ. ಬರಿ ಫ್ರೆಂಡ್‌ಶಿಪ್ ಆಗಿದ್ರೆ ಹೋಗ್ಲಿ ಅಂತಿದ್ದೆ. ಆದ್ರೆ ಆ ಹುಡ್ಗಿ ನಮ್ಮ ಹುಡುಗನ್ನ ಮದುವೆ ಆಗ್ತೀನಿ ಅಂತ ಹೇಳಿದ್ಲಂತೆ. ಫೋಟೊದಲ್ಲಿ ನೋಡಿದ್ದೀನಿ, ಹುಡುಗಿ ದಂತದ ಗೊಂಬೆ ಇದ್ದಂಗೆ ಇದಾಳೆ. ನಮಗೆಲ್ಲ ಒಪ್ಪಿಗೆ ಆಗಿತ್ತು. ಇತ್ತೀಚೆಗೆ ವಿಕ್ರಂ ದೇಶಪಾಂಡೆ ನಿಮ್ಮ ಸಂಬಂಧ ಬೆಳೆಸಲು ನಿರ್ಧರಿಸಿದ್ದಾನಂತೆ. ವಿಕ್ರಂ ದೇಶಪಾಂಡೆ ಮನೆಯ ಮೇಲೆ ಇ.ಡಿ.ಯವರು, ಸಿಬಿಐನವರು ಇವತ್ತು ರೈಡ್ ಮಾಡಿದ್ದಾರೆ. ಕೋಟ್ಯಂತರ ರೂಪಾಯಿ ಕೊಟ್ಟು ದೇಶಪಾಂಡೆ ತಪ್ಪಿಸಿಕೊಂಡಿದ್ದಾನೆ. ಅಂತಹವರೊಂದಿಗೆ ಸಂಬಂಧ ಮುಂದುವರಿಸಲು ನೀವು ಇಷ್ಟ ಪಡ್ತೀರ ಗುನ್ನಾಲಾಲ್ ಜಿ...' ಮಾತನಾಡುತ್ತಿದ್ದ ವ್ಯಕ್ತಿಯ ಧ್ವನಿಯಲ್ಲಿ ಒಂದಿಷ್ಟು ಒರಟುತನ ಇರುವುದು ಗುನ್ನಾಲಾಲನ ಗಮನಕ್ಕೆ ಬಂದಿತ್ತು.

'ನೀವು ಯಾರೆಂದು ತಿಳಿಯಲಿಲ್ಲ' ಎಂದು ವಿನಯವಾಗಿ ಕೇಳಿದ್ದ. ಗುರುತು, ಪರಿಚಯ ಇಲ್ಲದವರೊಂದಿಗೆ ಎಚ್ಚರಿಕೆಯಿಂದ ಮಾತನಾಡುವುದು ಗುನ್ನಾಲಾಲ್ ಮೊದಲಿಂದಲೂ ರೂಢಿಸಿಕೊಂಡು ಬಂದಿರುವ ಪರಿಪಾಟ.

'ನಾವೂ ಮಾರ್ವಾಡಿಗಳೇ ಗುನ್ನಾಲಾಲ್ ಜಿ. ನನ್ನ ಹೆಸರು ಗುಲ್ಶನ್ ಕುಮಾರ್. ಆದರೆ ಅಂಧೇರಿಯಲ್ಲಿ ನಾನು 'ಪೀಟರ್ ಸ್ಕಾಟ್' ಎಂದೇ ಹೆಸರುವಾಸಿ. ಇಪ್ಪತ್ತೈದು ವರ್ಷಗಳ ಹಿಂದೆ ನನ್ನ ಅಣ್ಣ ಚೋಟಾ ರಾಜನ್ ಜೊತೆ ಕೆಲಸ ಮಾಡುತ್ತಿದ್ದ. ಮೂರ್ನಾಲ್ಕು ಸಾರಿ ಗ್ಯಾಂಗ್ ವಾರ್‌ನಲ್ಲೂ ಅರೆಸ್ಟ್ ಆಗಿದ್ದ. ಅವನ ಸಹವಾಸ ಬೇಡವೆಂದು ನನ್ನ ಅಪ್ಪ ಎಷ್ಟು ಹೇಳಿದರೂ ಕೇಳಲಿಲ್ಲ. ನಮ್ಮಪ್ಪನ ಮಾತನ್ನು ಕೇಳದೇ ಹೋದದ್ದು ಒಳ್ಳೆಯದೇ ಆಯಿತು. ಚೋಟಾ ರಾಜನ್ ನೆರಳಲ್ಲಿ ಬಿಲ್ಡಿಂಗ್ ಕೆಲಸಗಳನ್ನು ಶುರು ಮಾಡಿದ. ಅರವತ್ತೆಂಟು ವರ್ಷ ವಯಸ್ಸು ಈಗ. ಎಡಗೈ, ಎಡಗಾಲುಗಳಿಗೆ ಸ್ಟ್ರೋಕ್ ಆಗಿ ಓಡಾಡುವುದಿಲ್ಲ. ಹಾಗಾಗಿ ಪೂರ್ತಿ ವ್ಯವಹಾರ ನಾನೇ ನೋಡಿಕೊಳ್ತೀನಿ. ನಿಮಗೆ ಗೊತ್ತಾ, ನಾನು ಓದಿದ್ದು ಮೆಡಿಸಿನ್. ಗೌರ್ನಮೆಂಟ್ ಆಸ್ಪತ್ರೆಯಲ್ಲಿ ಐದಾರು ವರ್ಷ ಡಾಕ್ಟರ್ ಆಗಿಯೂ ಕೆಲಸ ಮಾಡಿದೆ. ಆದರೆ ಈ ರಿಯಲ್ ಎಸ್ಟೇಟ್ ಬಿಸಿನೆಸ್‌ನಲ್ಲಿ ಇರೋ ದುಡಿಮೆ ಯಾವ ಕೆಲಸದಲ್ಲೂ ಇಲ್ಲ, ಬೇರೆ ಯಾವ ವ್ಯಾಪಾರದಲ್ಲೂ ಇಲ್ಲ. ನೀವೂ ನಮ್ಮವರೆಂದು ಗೊತ್ತಾಗಿ ಫೋನ್ ಮಾಡ್ತಾ ಇದ್ದೀನಿ. ನಾಳೆ ಮಧ್ಯಾಹ್ನ ಒಂದು ಗಂಟೆಗೆ ಅಂಧೇರಿಯ ಹೋಟೆಲ್ ನಾಜ್ ರೆಸ್ಟೋರೆಂಟ್‌ಗೆ ಬನ್ನಿ. ಒಳ್ಳೆಯ ಗುಜರಾತಿ ಊಟ ಸಿಗುತ್ತೆ. ಐದು ನಿಮಿಷ ಮಾತನಾಡಿ ಊಟ ಮಾಡಿಕೊಂಡು ಹೋಗುವಿರಂತೆ. ನಾನು ನಿಮಗೆ ಕಾಯ್ತಾ ಇರ್ತಿನಿ. ಅಂದಹಾಗೆ ನಾಜ್ ಹೋಟೆಲ್‌ಗೆ ನನ್ನ ಅಣ್ಣ ಪಂಕಜ್ ಕುಮಾರ್ ಕೂಡ ಒಬ್ಬ ಷೇರ್ ಹೋಲ್ಡರ್. ಗುಡ್ ನೈಟ್ ಗುನ್ನಾಲಾಲ್ ಜಿ' ಎಂದು ಹೇಳುತ್ತಿರುವಾಗ ಆ ಕಡೆಯಿಂದ ಫೋನ್ ಕಟ್ ಆಗಿತ್ತು.

ಗುನ್ನಾಲಾಲನಿಗೆ ಇದೊಂದು ರೀತಿಯ ಮಜಾ ಕಥೆಯಂತೆ ಅನ್ನಿಸಿತು. ರಾತ್ರಿ ಬಹಳ ಹೊತ್ತಿನವರಗೂ ನಿದ್ದೆ ಹತ್ತಿರಲಿಲ್ಲ. ಅಂಧೇರಿ ಇಡೀ ಮುಂಬಯಿಯಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್‌ನಲ್ಲಿ ಮೊದಲಿನಿಂದಲೂ ನಂಬರ್ ಒನ್ ಸ್ಥಾನ ಪಡೆದುಕೊಂಡಿರುವುದು ವ್ಯಾಪಾರಿ ಗುನ್ನಾಲಾಲನಿಗೆ ತಿಳಿಯದ ವಿಷಯವೇನೂ ಅಲ್ಲ. ಅಂಧೇರಿಯು ವಿಮಾನ ನಿಲ್ದಾಣಕ್ಕೆ ಹತ್ತಿರ ಇರುವ ಉಪ ನಗರವಾಗಿರುವುದರಿಂದ ಪ್ರಸ್ತುತದಲ್ಲೂ ಅಲ್ಲಿ ರಿಯಲ್ ಎಸ್ಟೇಟ್ ಉದ್ದಿಮೆ ನಾಗಾಲೋಟದಲ್ಲಿ ಸಾಗಿದೆ. ಮುಂಬಯಿಯ ದೊಡ್ಡ ದೊಡ್ಡ ಕಟ್ಟಡ ನಿರ್ಮಾಣ ಸಂಸ್ಥೆಗಳು ಅಂಧೇರಿಯಲ್ಲಿ ತಲೆ ಎತ್ತಿವೆ. ಭೂಗತ ಜಗತ್ತಿನ ಡಾನ್‌ಗಳು, ಖ್ಯಾತ ರೌಡಿಗಳು ಅಪರಾಧ ಜಗತ್ತನ್ನು ತೊರೆದು ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ತೊಡಗಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳು, ರಾಜಕಾರಣಿಗಳು, ಶ್ರೀಮಂತ ಉದ್ದಿಮೆದಾರರು, ಸಿನಿಮಾ ಜಗತ್ತಿನವರು ಯಥೇಚ್ಛವಾಗಿ ಇಲ್ಲಿ ಕಪ್ಪು ಹಣವನ್ನು ಇನ್ವೆಸ್ಟ್ ಮಾಡುತ್ತಾರೆ. ಹದಿನೈದು ವರ್ಷಗಳ ಹಿಂದೆ ರಿಯಲ್ ಎಸ್ಟೇಟ್ ಉದ್ದಿಮೆಗೆ ಹಣ ಹೂಡಲು ತನಗೆ ಪರಿಚಯವಿದ್ದ ಅರುಣ್ ಗಾವ್ಳಿ ಕಡೆಯವರು ಸಂಪರ್ಕಿಸಿದ್ದರು. ಆದರೆ ಗುನ್ನಾಲಾಲ್ ಆಸಕ್ತಿಯನ್ನು ತೋರಿಸಲಿಲ್ಲ. ಆಸ್ಕರ್ ಟವರ್ಸ್ ಕಟ್ಟಿದಾಗ ಕೂಡ ಪರೇಶ್ ಕಂಪನಿಯವರು ಹದಿನೈದಿಪ್ಪತ್ತು ಕೋಟಿಯನ್ನು ಗೋಲ್‌ಮಾಲ್ ಮಾಡಿದ್ದರು. ಅಲ್ಲದೆ ಹೆಸರಾಂತ ಬಿಲ್ಡರ್ ಕಂಪನಿಗಳೇ ಅಂಧೇರಿಯಲ್ಲಿ ಸಾರ್ವಜನಿಕರಿಗೆ ಮನೆ ಕಟ್ಟಿಸಿಕೊಡುವ ನೆಪದಲ್ಲಿ ಸಾವಿರಾರು ಕೋಟಿಗಳಷ್ಟು ಮೋಸ ಮಾಡಿರುವ ಅನೇಕ ಹಗರಣಗಳು ನಡೆದಿವೆ. ಇಂಥ ಹಗರಣಗಳಲ್ಲಿ ಮಹಾನಗರ ಪಾಲಿಕೆಯ, ಪೊಲೀಸ್ ಇಲಾಖೆಯ ಅಧಿಕಾರಿಗಳ, ರಾಜಕಾರಣಿಗಳ, ಲೋಕಲ್ ರೌಡಿಗಳ ಹೆಸರುಗಳೂ ಕೇಳಿಬಂದಿದೆ. ಮಾರನೆಯ ದಿನ ಬೆಳಗ್ಗೆ ಕಂಪನಿಯ ಕೆಲಸಗಳನ್ನು ಅವಲೋಕಿಸಿ ಮಗ ಭವರ್ ಲಾಲನಿಗೆ ತಿಳಿಸದೆ ಮಧ್ಯಾಹ್ನ ಒಂದು ಗಂಟೆಗೆ ಸರಿಯಾಗಿ ತನ್ನ ಭಂಟ ಹರ್ಷವರ್ಧನ್ ಶಿರೋಡ್ಕರ್ ಜೊತೆ ಸೇರಿ ಅಂಧೇರಿಯ ನಾಜ್ ರೆಸ್ಟೋರೆಂಟ್ ತಲುಪಿದ್ದ. ರೆಸೆಪ್ಷನ್ ಬಳಿ ಹೋಗುತ್ತಿದ್ದಂತೆಯೇ ಗನ್ ಮ್ಯಾನ್ ಒಬ್ಬ ಬಂದು ಅವರನ್ನು ನಾಲ್ಕನೇ ಮಹಡಿಯ ರೂಮೊಂದಕ್ಕೆ ಕರೆದುಕೊಂಡು ಹೋಗಿದ್ದ. ಮೆತ್ತನೆಯ ಸೋಫಾದ ಮೇಲೆ ಸುಮಾರು ಅರವತ್ತೈದು ವರ್ಷದ ವ್ಯಕ್ತಿ ಕುಳಿತಿದ್ದ. ಕಣ್ಣುಗಳು ತೀಕ್ಷ್ಣವಾಗಿದ್ದವು. ಟೀಪಾಯ್ ಮೇಲೆ ಪೀಟರ್ ಸ್ಕಾಟ್ ವಿಸ್ಕಿಯ ಫುಲ್ ಬಾಟಲ್ ಇದ್ದು ಸುಂದರವಾದ ಗ್ಲಾಸಿನಲ್ಲಿ ನೀರು ಬೆರೆಸಿದ ವಿಸ್ಕಿ ಸಣ್ಣ ಸಣ್ಣ ಅಲೆಗಳಂತೆ ಅಲುಗಾಡುತ್ತಿತ್ತು.

'ಬನ್ನಿ ಗುನ್ನಾಲಾಲ್ ಜಿ ಕೂತ್ಕೊಳಿ. ನನ್ನ ಮಾತಿಗೆ ಬೆಲೆ ಕೊಟ್ಟಿದ್ದೀರಿ, ಧನ್ಯವಾದಗಳು ನಿಮಗೆ. ಯಾವುದೇ ವ್ಯವಹಾರ ಮಾತನಾಡುವಾಗಲೂ ನಾನು ಈ ಪೀಟರ್ ಸ್ಕಾಟ್ ವಿಸ್ಕಿಯನ್ನು ಮೂರ್ನಾಲ್ಕು ಪೆಗ್ ತಗೋತಿನಿ. ಇದು ಮೂವತ್ತು ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಹಾಗಾಗಿ ಫೀಲ್ಡ್‌ನಲ್ಲಿ ನನಗೆ ಪೀಟರ್ ಸ್ಕಾಟ್ ಅಂತಾನೇ ಕರಿತಾರೆ. ಇದನ್ನು ತೆಗೆದುಕೊಂಡಾಗ ನನ್ನ ವ್ಯವಹಾರಗಳು ಫೇಲ್ ಆಗಿದ್ದೇ ಇಲ್ಲ. ದೇಶಪಾಂಡೆ ಅವರಪ್ಪ ಹಿಂದೆ ದೊಡ್ಡ ಬಿಲ್ಡರ್. ತುಂಬಾ ದೋಖಾ ಮಾಡಿ ಕೋಟ್ಯಂತರ ಸಂಪಾದಿಸಿದ. ಈಗ ಮಗ ಅಧಿಕಾರದಲ್ಲಿ ಇರುವುದೇ ಅದನ್ನ ಕಾಪಾಡಿಕೊಳ್ಳೋದಕ್ಕೆ. ಲೆಕ್ಕದಲ್ಲಿ ಮಾತ್ರ ಪಕ್ಕಾ ಇದಾನೆ ಆಸಾಮಿ. ನಿನ್ನೆ ನಡೆದ ರೈಡ್‌ಗೆ ನಾನೂ ಸ್ವಲ್ಪ ಕಾರಣವೇ. ನಮ್ಮ ಬಿಸಿನೆಸ್‌ನಲ್ಲಿ ಮಂತ್ರಿಯೊಬ್ಬರು ಬಂಡವಾಳ